# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ : 128 (1114)

ಸದಸ್ಯರ ಹೆಸರು : ಡಾ॥ ಯತೀಂದ್ರ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 17.03.2025.

ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು .

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವಲ್ಲಿ ಖಾಸಗಿ ಕನ್ನಡ ಶಾಲೆಗಳ ಪಾತ್ರ ಬಹುಮುಖ್ಯವಾದದ್ದು, ಆದರೆ ಖಾಸಗಿ ಕನ್ನಡ ಶಾಲೆಗಳು ಆರ್ಥಿಕವಾಗಿ ಸಂಕಷ್ಟದಲ್ಲಿದ್ದು, ಬಹಳಷ್ಟು ಶಾಲೆಗಳು ಮುಚ್ಚುವ ಹಂತದಲ್ಲಿದ್ದು, ಸದರಿಯವರಿಗೆ ಸರ್ಕಾರದ ಬೆಂಬಲ ಅವಶ್ಯವಿರುವುದರಿಂದ ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ಒದಗಿಸುವುದು) | • 1994–95ರ ಪೂರ್ವದ ಶೈಕ್ಷಣಿಕ ಅವಧಿಯಲ್ಲಿ ಪ್ರಾರಂಭವಾಗಿ ಸತತವಾಗಿ ನಡೆಯುತ್ತಿರುವ ಅನುದಾನರಹಿತ ಕನ್ನಡ ಮಾಧ್ಯಮದ ಶಾಲೆಗಳ ಆಡಳಿತ ಮಂಡಳಿಯು ಸಹಾಯಾನುದಾನ ಕೋರಿ ಸಲ್ಲಿಸಿರುವ ಪ್ರಸ್ತಾವನೆಗಳನ್ನು ಕರ್ನಾಟಕ ಶಿಕ್ಷಣ ಕಾಯ್ದೆ–1983 ಮತ್ತು ಅದರಡಿಯಲ್ಲಿ ರಚಿಸಿರುವ ನಿಯಮಗಳನ್ವಯ ಪರಿಶೀಲಿಸಿ ಆರ್ಥಿಕ ಇಲಾಖೆಯ ಸಹಮತಿ ಪಡೆದು ಸಹಾಯಾನುದಾನಕ್ಕೊಳಪಡಿಸಲಾಗಿರುತ್ತದೆ.<br>ಸಹಾಯಾನುದಾನಕ್ಕೊಳಪಡಿಸಿರುವ ಖಾಸಗಿ ಶಾಲೆಗಳಿಗೆ ಮಧ್ಯಾಹ್ನ ಬಿಸಿಯೂಟ ಯೋಜನೆಯನ್ನು ಜಾರಿಗೊಳಿಸಲಾಗಿದೆ ಹಾಗೂ ಮಕ್ಕಳಿಗೆ ಉಚಿತ ಪಠ್ಯಪುಸ್ತಕಗಳನ್ನು ನೀಡಲಾಗುತ್ತಿದೆ.<br>• **ಸಹಾಯಾನುದಾನಕ್ಕೆ ಒಳಪಡಿಸಿರುವ ಶಾಲೆಗಳ ಸಂಖ್ಯೆ:**<br>ಪ್ರಾಥಮಿಕ ಶಾಲೆಗಳು–2384.<br>ಪ್ರೌಢ ಶಾಲೆಗಳು–3386.<br>• ರಾಜ್ಯದಲ್ಲಿನ ಖಾಸಗಿ ಅನದಾನರಹಿತ ಶಾಲೆಗಳಿಗೆ ಇಲಾಖೆಯಿಂದ ಈ ಕೆಳಕಂಡ ಸಹಾಯ/ಬೆಂಬಲವನ್ನು |

| | | |
|---|---|---|
| | | ನೀಡಲಾಗುತ್ತಿದೆ.<br>1. ಅನುದಾನರಹಿತ ಶಾಲೆಗಳ ಶಿಕ್ಷಕರ ತರಬೇತಿಗೆ ಸಂಬಂಧಿಸಿದಂತೆ ಇಲಾಖೆಯ ಡಯಟ್ ಹಾಗೂ ತಾಲ್ಲೂಕು ಹಂತದ ಸಂಪನ್ಮೂಲ ವ್ಯಕ್ತಿಗಳ ಸಹಕಾರವನ್ನು ಪಡೆದುಕೊಳ್ಳಬಹುದಾಗಿದೆ.<br>2. ಅನುದಾನರಹಿತ ಶಾಲೆಗಳ ಶಿಕ್ಷಕರು ಬೋಧನೆ ಮತ್ತು ಕಲಿಕೆಯಲ್ಲಿ ತಂತ್ರಜ್ಞಾನ ಅಳವಡಿಕೆ, ಬೋಧನಾ ವಿಧಾನಗಳು, ವಿನೂತನ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ Online ತರಬೇತಿ ಹಾಗೂ ತರಬೇತಿಗಳ E-Content ಗಳನ್ನು DSERT Website ನಿಂದ ಬಳಸಿಕೊಳ್ಳಬಹುದು.<br>• ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ಶಿಕ್ಷಕರ ಸದನ, ಬೆಂಗಳೂರು ಈ ಕಛೇರಿಯಿಂದ ನೋಂದಣಿ ಪಡೆದಂತಹ ರಾಜ್ಯದ ಖಾಸಗಿ ಅನುದಾನರಹಿತ ಕನ್ನಡ ಶಾಲೆಗಳ ವಿದ್ಯಾರ್ಥಿಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.<br>1. ಸಾಹಸಿ ವಿದ್ಯಾರ್ಥಿಗಳಿಗೆ ಶೌರ್ಯ ಪ್ರಶಸ್ತಿಗಳು.(ತಲಾ ರೂ.10,000)<br>2. ರಾಜ್ಯ ಮಟ್ಟದ ಕ್ರೀಡಾ ಸ್ಪರ್ದೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ವಾರ್ಷಿಕ ಬಹುಮಾನ.<br>3. ವಿದ್ಯಾರ್ಥಿಗಳಿಗೆ ವೈದ್ಯಕೀಯ ಧನಸಹಾಯ. (ರೂ.20,000/–ದಿಂದ 2,50,000/–ವರೆಗೆ) |

| | | |
|---|---|---|
| | | 4. ವಿದ್ಯಾರ್ಥಿಗಳಿಗೆ ಆಕಸ್ಮಿಕ ಅಪಘಾತ ಪರಿಹಾರ ಯೋಜನೆ (ತಲಾ ರೂ.1,25,000/–)<br>5. ವಿದ್ಯಾರ್ಥಿಗಳಿಗೆ ಸಹಜ ಮರಣ ಪರಿಹಾರ ಯೋಜನೆ. (ತಲಾ ರೂ.25,000/–)<br>6. ಎಸ್‌ಎಸ್‌ಎಲ್‌ಸಿ/ದ್ವಿತೀಯ ಪಿ.ಯು.ಸಿ ಪರೀಕ್ಷೆಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ನಗದು ಪ್ರಶಸ್ತಿಗಳು. (ಎಸ್‌ಎಸ್‌ಎಲ್‌ಸಿಯಲ್ಲಿ ಜಿಲ್ಲೆಗೆ 10 ಮಕ್ಕಳಿಗೆ ತಲಾ ರೂ.2,000/– ಮತ್ತು ಪಿಯುಸಿಯಲ್ಲಿ ಜಿಲ್ಲೆಗೆ 12 ಮಕ್ಕಳಿಗೆ ತಲಾ 3,000/–<br>7. ಶೇಕಡ 100ರಷ್ಟು ಫಲಿತಾಂಶ ಪಡೆದ ಶಾಲಾ ಕಾಲೇಜುಗಳಿಗೆ ಮೊಮೆಂಟೋ, ಪ್ರಶಸ್ತಿ ಪತ್ರ, ಸನ್ಮಾನ ಪುರಸ್ಕಾರ ಹಾಗೂ ಸರ್ಕಾರಿ ಮತ್ತು ಅನುದಾನಿತ ಶಾಲಾ ಕಾಲೇಜುಗಳಿಗೆ ರೂ.25,000/–ಪ್ರೋತ್ಸಾಹ ಧನಸಹಾಯ.<br>8. ಶಾಲಾ ಕಾಲೇಜು ಪ್ರವಾಸ/ಕ್ರೀಡೆ/ಸರ್ಕಾರಿ ಸಮಾರಂಭಗಳಲ್ಲಿ ಭಾಗವಹಿಸಲು ಬರುವ ವಿದ್ಯಾರ್ಥಿಗಳಿಗೆ ಅವರ ಶಿಕ್ಷಕರೊಂದಿಗೆ ತಂಗಲು ರಿಯಾಯಿತಿ ದರದಲ್ಲಿ ಡಾರ್ಮೆಟರಿ ಹಾಗೂ ಕೊಠಡಿಗಳನ್ನು ನೀಡಲಾಗುತ್ತದೆ.<br>9. ವಿಶೇಷ ಚೇತನ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ಮಾರ್ಚ್/ ಏಪ್ರಿಲ್‌ನಲ್ಲಿ ನಡೆಯುವ ಎಸ್.ಎಸ್.ಎಲ್.ಸಿ/ಪಿ.ಯು.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪ್ರತಿ ಜಿಲ್ಲೆಯ ಟಾಪ್ 25 |

| | | |
|---|---|---|
| | | ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ. (ಪ್ರತಿ ವರ್ಷ 350 ಮಕ್ಕಳಿಗೆ ತಲಾ ರೂ.5,000/-ರಂತೆ ವಿದ್ಯಾರ್ಥಿ ವೇತನ)<br>• ಖಾಸಗಿ ಶಾಲೆಗಳ ಪ್ರಥಮ ಮಾನ್ಯತೆ/ ಮಾನ್ಯತೆ ನವೀಕರಣ ಮತ್ತು ನಿರಾಕ್ಷೇಪಣಾ ಪ್ರಮಾಣ ಪತ್ರ ಪಡೆಯುವ ಪ್ರಕ್ರಿಯೆಯನ್ನು ಸರಳೀಕರಿಸಿ ಸಲ್ಲಿಸಬೇಕಾಗಿದ್ದ ದಾಖಲೆಗಳು ಮತ್ತು ದೃಢೀಕರಣಗಳನ್ನು 48ರಿಂದ 25ಕ್ಕೆ ಕಡಿಮೆ ಮಾಡಲಾಗಿರುತ್ತದೆ. ತ್ವರಿತಗತಿಯಲ್ಲಿ ಕಾರ್ಯ ನಿರ್ವಹಿಸಲು ಅನುವಾಗುವಂತೆ ಸಕಾಲ ಸೇವೆಗಳಡಿ ಒದಗಿಸಲಾಗುತ್ತಿದೆ.<br>• 1995ರ ನಂತರ ಪ್ರಾರಂಭಿಸಲಾಗಿರುವ ಕನ್ನಡ ಮಾಧ್ಯಮ ಖಾಸಗಿ ಶಾಲೆಗಳನ್ನು ಸಹಾಯಾನುದಾನಕ್ಕೊಳಪಡಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ. |

**ಸಂಖ್ಯೆ: ಇಪಿ 100 ಪಿಜಿಸಿ 2025**

**(ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು